ಪದಬಂಧ



ಎಡದಿಂದ ಬಲಕ್ಕೆ:

1. ಸಾಹುಕಾರನ ಮನೆಯಲ್ಲೂ ಅದೇ ಸಾಬೂನು (4)
3. ವ್ಯಾಯಾಮ ಕ್ರಮ ರೂಪಿಸುವಲ್ಲಿ ಆತನದೇ ಭಾರೀ ದಾಖಲೆ (3)
4. ಕಳಚಿ ಬಿತ್ತು ನೋಡಿ ಬಾಗಿಲಿನ ಬಂಧ (3)
6. ದೇವನಂತೆಯೇ ಆದ ಮಹಾನ್ ಶ್ರೀಮಂತ (4)
7. ಒಳ್ಳೆಯ ನಗು ಬೀರುವವಳೆಂದೇ ಆಕೆಯ ಹೆಸರು (4)
9. ಹೊಲವನ್ನು ಮಾರಿದವರು ಅಲ್ಲಿ ಒಬ್ಬಿಬ್ಬರಲ್ಲ (4)
12. ಬೆರಳಷ್ಟೇ ಏಕೆ? ಅದೇ ಇಡೀ ಶರೀರ (4)
14. ಗುಣಾಕಾರ ಕಲಿಯಬಂದವರ ಸಂಖ್ಯೆ ಎಣಿಸುವಂಥದ್ದು (3)
15. ಟೊಂಗೆಯನ್ನೇರುವ ಯತ್ನದಲ್ಲಿದೆ ಗಂಡು ಕುರಿ (3)
16. ಪಾಸಾದವರ ಕೂಟಕ್ಕೆ ರುಚಿ ರುಚಿ ಅಡುಗೆ (4)

ಮೇಲಿಂದ ಕೆಳಕ್ಕೆ:

1. ಆ ಸಂಪತ್ತು ಎಲ್ಲವೂ ದೇವರಿಗೇ ಒಪ್ಪಿಸಿದ್ದು (4)
2. ನೀರನ್ನು ಎರಚಿಸುವ ಯಂತ್ರವನ್ನು ತಯಾರಿಸು (4)
3. ಗೋವಿಂದನ ಆರಾಧನೆಗೂ ಒಂದು ಕ್ರಮ ಇದೆ (3)
5. ಕೈ ಕೆಲಸಗಳನ್ನೆಲ್ಲ ಅರಿಯುವಂತೆ ಮಾಡಿ (3)
6. ಮೋಹನನ ಮನದ ತುಂಬ ಬರೀ ಹಣದ ಆಸೆ (4)
8. ನೀರು ದೊರಕದೆಂಬ ಸುದ್ದಿಗೆ ತಳ ಬುಡವಿಲ್ಲ (4)
10. ಪಲ್ಲಂಗವನ್ನೇ ಕದ್ದು ಸಾಗಿಸಿದ ಪುಂಡ ಮನುಷ್ಯ (3)
11. ಯಾರೂ ಚಕಾರ ಎತ್ತದಂತೆ ಪ್ರತಿಯೊಂದೂ ನಾಲಿಗೆಗೆ ಹಿತಕರ (4)
12. ಕಾಟ ಕೊಡುವವರಿಂದ ಪಾರು ಮಾಡುವ ಪಂಚತಂತ್ರದ ನರಿ (4)
13. ಬಂಗಾರ ಕಸಿಯಲು ಬಂದರೆ ಪರಚು (3)

## 5-5-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಜರೀಗಿಡ; 3. ಸಕಲ; 7. ಕುಣಿದಾಟ; 8. ಪ್ರಲೋಭ; 9. ಕದ; 12. ಮಷಿ; 14. ವಿದಾಯ; 15. ತಾಸುಕಾಲ, 17. ನಾಟಕ; 18. ಪರವಶ.

ಮೇಲಿಂದ ಕೆಳಕ್ಕೆ:

1. ಜಲ; 2. ಗಿರಣಿ; 4. ಕಳ್ಳಭಯ; 5. ಕಂಟಕ; 6. ಅಪ್ರತಿಮ; 10. ದಣಾಯಕ; 11. ಸವಿಯೂಟ; 13. ಸಿತಾರ; 16. ಕಾಲರ; 17. ನಾಶ.

# ಪ್ರಶ್ನಾ ೦ಕಣ

## ಅಗೇಟ್-ಏನು ವಿಶೇಷ?

ಕ್ವಾರ್ಟ್ಜ್ ಖನಿಜಗಳಲ್ಲೊಂದು ಪ್ರಧಾನ, ಪ್ರಸಿದ್ಧ ಬಗೆಯಾದ 'ಕಾಲ್ಸೆಡೊನಿ'ಯ ಒಂದು ವಿಶಿಷ್ಟ ವಿಧದ ಖನಿಜವೇ 'ಅಗೇಟ್.' ಕಾಲ್ಸೆಡೋನಿಯ ಇತರ ವಿಧಗಳಾದ ಕ್ರೈಸೋಫೇಸ್, ಕಾರ್ನೆಲಿಯಾನ್, ಸಾರ್ಡ್, ಆನಿಕ್ಸ್, ಜಾಸ್ಪರ್ ಇತ್ಯಾದಿಗಳಂತೆ ಅಗೇಟ್ ಕೂಡ ಒಂದು ಪ್ರಶಸ್ತ ಖನಿಜ; ಆಭರಣ ಯೋಗ್ಯ ಹರಳು ಕೂಡ. ಹೊಳಪು, ಗಟ್ಟಿತನ ಹಾಗೂ ಬಹುವರ್ಣಗಳ ಅತಿ ಸುಂದರ ಚಿತ್ತಾರಗಳಿಂದಾಗಿ ಅಗೇಟ್‌ಗೆ ರತ್ನ ಸದೃಶ ಸ್ಥಾನ ಕೂಡ.

ಅಗೇಟ್‌ನ ವೈಶಿಷ್ಟ್ಯ ಅದರ ವರ್ಣಮಯ, ಏಕ ಕೇಂದ್ರೀಯ ಗೆರೆ-ಪಟ್ಟೆ ಚಿತ್ತಾರ (ಚಿತ್ರ ನೋಡಿ). ಜ್ವಾಲಾಮುಖಿ ಜನ್ಯ ಶಿಲೆಗಳು- ವಿಶೇಷವಾಗಿ ಬಸಾಲ್ಟ್ ಶಿಲೆ- ರೂಪುಗೊಳ್ಳುತ್ತಿರುವಾಗ ಆಕಸ್ಮಿಕವಾಗಿ ಅವುಗಳಲ್ಲಿನ ರಂಧ್ರ ಅಥವಾ ಬಿರುಕುಗಳಿಗೆ ಸಿಲಿಕಾ ಭರಿತ ಅಂತರ್ಜಲ ಜಿನುಗತೊಡಗಿದರೆ ಅಗೇಟ್‌ನ ಸೂಕ್ಷ್ಮ ಹರಳುಗಳು ಒತ್ತೊತ್ತಾಗಿ ಮೈದಳೆಯುತ್ತ ಅಂಥ ಸಾವಿರಾರು ಮೈಕ್ರೋಹರಳುಗಳು ಬಂಧಗೊಂಡು ಅಗೇಟ್ ಹರಳುಗಟ್ಟುತ್ತದೆ. ಅಗೇಟ್‌ನ ಹರಳುಗಳು ಅವು ರೂಪುಗೊಳ್ಳುವ ಬಂಡೆಗಳ ರಂಧ್ರ, ಬಿರುಕುಗಳ ಅಂಚುಗಳನ್ನೇ ಅನುಸರಿಸಿ ಪದರ ಪದರವಾಗಿ ಮೈದಳೆಯುವುದರಿಂದ ಅಂತಿಮವಾಗಿ ಇಡೀ ಹರಳು ಬಿರುಕು- ರಂಧ್ರಗಳ ಆಕಾರವನ್ನೇ ಪಡೆದ ಏಕ ಕೇಂದ್ರೀಯ ಗೆರೆ-ಪಟ್ಟೆಗಳ ಚಿತ್ತಾರವನ್ನೇ ಪಡೆಯುತ್ತದೆ. ಅದೊಂದು ಅತಿ ನಿಧಾನದ, ಬಹುವಿಧ ವಿಸ್ಮಯದ, ನಾನಾ ಯೋಗಾಯೋಗಗಳ ಸಮ್ಮಿಲನದ ವಿದ್ಯಮಾನ.

ಸಿಸಿಲಿ ದೇಶದ 'ಅಖೇಟ್ಸ್' ನದಿಯ ಪಾತ್ರದಲ್ಲಿ ಕ್ರಿಸ್ತಪೂರ್ವದ ಹಲವು ಶತಮಾನಗಳ ಹಿಂದೆಯೇ ಪ್ರಥಮವಾಗಿ ಪತ್ತೆಯಾದ ಈ ಖನಿಜಕ್ಕೆ ಅದಕ್ಕೇ ಅಗೇಟ್ ಎಂಬ ಹೆಸರು. ವಿಸ್ಮಯ ಏನೆಂದರೆ ಅಗೇಟ್‌ನಲ್ಲೇ ಹಲವಾರು ವಿಧಗಳಿವೆ ಕೂಡ. ಈ ಹರಳುಗಳ ಗೆರೆ ಪಟ್ಟೆ ಚಿತ್ತಾರಗಳ ಬಣ್ಣ ಮತ್ತು




ರೂಪಗಳನ್ನಾಧರಿಸಿ ಅವುಗಳನ್ನು ಭಿನ್ನ ಭಿನ್ನವಾಗಿ ಗುರುತಿಸಲಾಗುತ್ತದೆ: 'ಬಿಳುಪಿನ ಹಿನ್ನೆಲೆಯಲ್ಲಿ ಕಪ್ಪು ಮೋಡ ತೇಲುತ್ತಿರುವಂಥ ರೂಪದ ಕ್ಲೌಡ್ ಅಗೇಟ್, ಭಗ್ನಾವಶೇಷಗಳು ಚೆಲ್ಲಾಪಿಲ್ಲಿಯಾಗಿರುವಂತೆ ಕಾಣುವ ರೂಯಿನ್ ಅಗೇಟ್, ಉರಿಯುತ್ತಿರುವ ಜ್ವಾಲೆಯಂತೆ ತೋರುವ ಫೈರ್ ಅಗೇಟ್, ಅಡವಿ ದೃಶ್ಯಗಳನ್ನು ಹೋಲುವ ಚಿತ್ತಾರದ ಸೀನಿಕ್ ಅಗೇಟ್, ಬಣ್ಣ ಬಣ್ಣದ ಪಟ್ಟೆಗಳ ಬ್ಯಾಂಡೆಡ್ ಅಗೇಟ್... ಹಾಗೆಯೇ ಬ್ಲೂ ಲೇಸ್ ಅಗೇಟ್, ಮಾಸ್ ಅಗೇಟ್, ಥಂಡರ್ ಎಗ್ ಅಗೇಟ್ ಇತ್ಯಾದಿ.'

ಆಭರಣ ಹರಳುಗಳಾಗಿ ಅಷ್ಟೇ ಅಲ್ಲದೆ ಅಗೇಟ್‌ನ ಭಾರೀ ಹರಳುಗಳಿಂದ ವಿಗ್ರಹಗಳು ಅಲಂಕಾರಿಕ ಬಟ್ಟಲುಗಳು ಇತ್ಯಾದಿ ನಾನಾ ವಿಧ ಕಲಾಕೃತಿಗಳೂ ನಿರ್ಮಾಣಗೊಳ್ಳುತ್ತಿವೆ. ಹಾಗಾಗಿ ಅಗೇಟ್‌ಗೆ ಜಗತ್ತಿನೆಲ್ಲೆಡೆ ಭಾರೀ ಬೇಡಿಕೆ ಇದೆ.

■ ಎನ್. ವಾಸುದೇವ್